

ಕರ್ನಾಟಕದ ಅಗ್ರಗಣ್ಯ ಚಾರಣದ ತಾಣಗಳಲ್ಲೊಂದು ಮಲೆನಾಡಿನ ಕೊಡಚಾದ್ರಿ ಪರ್ವತ. ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನಿಂದ 46 ಕಿ.ಮೀ ಹಾಗೂ ಕೊಲ್ಲೂರಿನಿಂದ ಸುಮಾರು 37 ಕಿ.ಮೀ ದೂರದಲ್ಲಿದೆ.

ಕೊಡಚಾದ್ರಿ ಗಿರಿಶೃಂಗವನ್ನು ತಲುಪಿ ಅಲ್ಲಿನ ಚುಮು ಚುಮು ಚಳಿಯ ಇಬ್ಬನಿ ಹನಿಗಳಿಂದ ತೋಯ್ದು ಹುಲ್ಲುಗರಿಕೆಯ ಹಾಸಿಗೆಯಂತೆ ಕಂಗೊಳಿಸುವ ಕಾಲುದಾರಿಯಲ್ಲಿ ಜಗತ್ತನ್ನೇ ಮರೆಯುತ್ತಾ ಸಾಗಬೇಕು ಎನ್ನುವುದು ಪ್ರವಾಸಿಗರ ಕನಸೇನೋ ಹೌದು. ಆದರೆ ಇದರ ಶೃಂಗವನ್ನು ತಲುಪುವುದು ಅಷ್ಟು ಸುಲಭದ ಮಾತಲ್ಲ.

ಕೊಡಚಾದ್ರಿ ಗಿರಿಯ ಪ್ರಯಾಣದಲ್ಲಿ ನಿಟ್ಟೂರು ಕೇಂದ್ರ ಸ್ಥಾನ. ತೀರ್ಥಹಳ್ಳಿ ಹೊಸನಗರ ಮೂಲಕ ಕೊಲ್ಲೂರಿಗೆ ಸಾಗುವ ದಾರಿ ಮಧ್ಯೆ ನಿಟ್ಟೂರು ಎಡಗಡೆ ಹಾಗೂ ಕೊಲ್ಲೂರು ಹೊಸನಗರ ರಸ್ತೆಯಲ್ಲಿ ಸಾಗುವ ದಾರಿಯಲ್ಲಿ 32 ಕೀ.ಮೀ ಸಾಗುತ್ತಿದ್ದಂತೆ ನಿಟ್ಟೂರಿನಲ್ಲಿ ಬಲತಿರುವು ಮೂಲಕ ಕಚ್ಚಾ ರಸ್ತೆಯಲ್ಲಿ ಸಾಗಬೇಕು. ನಿಟ್ಟೂರಿನಿಂದ ಕೊಡಚಾದ್ರಿಗೆ 12 ಕಿ.ಮೀ ಕಡಿದಾದ ರಸ್ತೆಯ ಮೂಲಕವೇ ಸಾಗಬೇಲು. ಪರ್ಯಾಯ ರಸ್ತೆಯೇ ಇಲ್ಲ.

ಅಪಾಯಕಾರಿ ಮತ್ತು ಏರು ತಗ್ಗುಗಳಿಂದ ಕೂಡಿದ ಕಚ್ಚಾ ರಸ್ತೆಯಾದ್ದರಿಂದ ಸಾಮಾನ್ಯ ಕಾರುಗಳ ಮೂಲಕ ಇಲ್ಲಿನ ರಸ್ತೆಯಲ್ಲಿ ಸಾಗುವುದು ಅಸಾಧ್ಯ. ನಿಟ್ಟೂರಿನಿಂದ ಒಂದೂವರೆ ಕಿ.ಮೀ ಸಾಗುತ್ತಿದ್ದಂತೆ ಅರಣ್ಯ ಇಲಾಖೆಯ ಗೇಟ್ ಸಿಗುತ್ತದೆ. ಇಲ್ಲಿ ಪ್ರತೀ ವಾಹನಕ್ಕೆ ರೂ.100 ಪ್ರವೇಶ ಶುಲ್ಕವನ್ನು ಪಾವತಿಸಿ ರಶೀದಿ ಪಡೆದುಕೊಂಡು ಪ್ರಯಾಣಿಸಬೇಕು.

## ಸಂಪರ್ಕ ಸೇತುಗಳು

ಕೊಡಚಾದ್ರಿಗೆ ಸಾಗುವ ದಾರಿ ಹಾಗೂ ಪ್ರಯಾಣ ಸವಾಲಿನಿಂದ ಕೂಡಿದೆ ಎನ್ನಬಹುದು. ಸಾಮಾನ್ಯ ಚಾಲಕರು ಈ ರಸ್ತೆಯಲ್ಲಿ ವಾಹನಗಳನ್ನು ಚಲಾಯಿಸುವುದು ಕಷ್ಟ. 12 ಕಿ.ಮೀ ದೂರದ ರಸ್ತೆಯನ್ನು ದಟ್ಟಾರಣ್ಯದ ನಡುವೆ ನಡೆದುಕೊಂಡು ಸಾಗಬೇಕು, ಇಲ್ಲವೇ ಸಿಂಗಲ್ ರೈಡಿಂಗ್ ಮೂಲಕ ಬೈಕ್‌ಗಳಲ್ಲಿ ಎಚ್ಚರಿಕೆಯಿಂದ ಸಾಗಬಹುದು. ಇವೆರಡನ್ನು ಬಿಟ್ಟರೆ ಈ ರಸ್ತೆಯಲ್ಲಿ ಜೀಪ್‌ಗಳಷ್ಟೇ ಸಂಚರಿಸಬಹುದು. ಇಂತಹ ಸವಾಲಿನ ರಸ್ತೆಯ ಮೂಲಕ ಪ್ರವಾಸಿಗರನ್ನು ಗಿರಿಯ ತುತ್ತತುದಿಗೆ ತಲುಪಿಸುವ ಸಂಪರ್ಕ ಸೇತುಗಳೆಂದರೆ ಇಲ್ಲಿನ ಬಾಡಿಗೆ ಜೀಪ್‌ಗಳ ಚಾಲಕರು. ಇವರನ್ನು ಈ ರಸ್ತೆಯ ಡರ್ಟ್‌ಟ್ರ್ಯಾಕ್ ಚಾಲಕರೆನ್ನಬಹುದು. ಇವರು ಸಾಹಸಿ ಚಾಲಕರಿಗಿಂತ ಕಮ್ಮಿ ಏನಿಲ್ಲ.

ಈ ಶಿಖರದ ಮೇಲ್ಭಾಗದವರೆಗೆ ರಸ್ತೆ ನಿರ್ಮಿಸಿರುವುದೇ ಒಂದು ಸಾಹಸಗಾಥೆ, ಇಂತಹ ಪರ್ವತದ ತುದಿಗೆ ಅರಣ್ಯ ಇಲಾಖೆ ರಸ್ತೆ ನಿರ್ಮಿಸಿ ಅದರ ಮೂಲಕ ಸಂಪರ್ಕ ಸಾಧಿಸಿರುವುದು ಅದ್ಭುತವೇ ಸರಿ. ಪ್ರಕೃತಿಯ ಸೌಂದರ್ಯವನ್ನು ಸವಿಯುವುದರ ಹಿಂದೆ ಪ್ರಾಣವನ್ನೇ ಪಣವಾಗಿಡುವಂತಹ ಪ್ರಯಾಣದ ಅಪಾಯವೂ ಇಲ್ಲಿದೆ. ಇಂತಹ ರಸ್ತೆಯಲ್ಲಿ ಪ್ರವಾಸಿಗರನ್ನು ಹೊತ್ತೊಯ್ಯುತ್ತಾ ನಿತ್ಯ ಸಾವಿನೊಂದಿಗೆ ಸರಸವಾಡುವವರು ಇಲ್ಲಿನ ಸುಮಾರು 40 ಮಂದಿ ಸಾಹಸಿ ಜೀಪ್ ಚಾಲಕರು. ಇಲ್ಲಿ ಒಟ್ಟು 120 ಜೀಪ್‌ಗಳು ಕೊಲ್ಲೂರಿನಿಂದ ನಿತ್ಯ ಪ್ರಯಾಣಿಕರನ್ನು ಹೊತ್ತು ಕೊಡಚಾದ್ರಿಯ ಶಿಖರಕ್ಕೆ ಸಾಗುತ್ತವೆ. ಇಲ್ಲಿ ಬಹುತೇಕ ಮಂದಿ ಮಾಲೀಕರ ಜೀಪ್‌ಗಳಿಗೆ ಚಾಲಕರಾಗಿ ಟ್ರಿಪ್ ಒಂದಕ್ಕೆ 600 ರೂಪಾಯಿವರೆಗೂ ದುಡಿಯುತ್ತಾರೆ. ವಿಶೇಷ ಸಂದರ್ಭಗಳ ಸಮಯದಲ್ಲಿ ಪ್ರತಿ ಚಾಲಕರು ದಿನದಲ್ಲಿ ಸುಮಾರು ಎರಡು ಟ್ರಿಪ್‌ಗಳನ್ನು ಪೂರೈಸುತ್ತಾರೆ.

ಮಳೆಗಾಲದಲ್ಲಿ ಅತ್ಯಂತ ಕಡಿದಾದ ಜಾರುವ ರಸ್ತೆಗಳಲ್ಲಿ ಪ್ರಯಾಣಿಕರನ್ನು ಹೊತ್ತ ಜೀಪ್‌ಗಳನ್ನು ಈ ಚಾಲಕರು ಯಾವುದೇ ಅಳುಕಿಲ್ಲದೇ ಚಲಾಯಿಸುತ್ತಾರೆ. ಜೂನ್‌ನಿಂದ ಸೆಪ್ಟೆಂಬರ್ ತಿಂಗಳವರೆಗೂ ಜಡಿಮಳೆ ಬೀಳುವ ಸಂದರ್ಭದಲ್ಲೂ ಇವರ ಕಾಯಕ ನಿರಂತರವಾಗಿ ಸಾಗುತ್ತದೆ. ದಟ್ಟವಾಗಿ ಹರಡಿರುವ ಮಂಜಿನ ಕಾರಣದಿಂದಾಗಿ ಎದುರುಗಡೆ ಎರಡರಿಂದ ಮೂರು ಅಡಿ ದೂರವೂ ಕಾಣಿಸದ ಸಂದರ್ಭದಲ್ಲಿ ಕಡಿದಾದ ಹಿಮ್ಮುರಿ ತಿರುವು ಹಾಗೂ ಪ್ರಪಾತಗಳ ಅಂಚಿನ ರಸ್ತೆಗಳಲ್ಲಿ ಯಾವುದೇ ಅಳುಕಿಲ್ಲದೆ